# ಜೀವಕೋಶಗಳ ಪುನರುಜ್ಜೀವನಕ್ಕೆ ರಸೌಷಧ


## ರಾಜೂ ಬಾಣ

**ಎಸ್.ಎಂ.ರಾಜು**

ಹಿರಿಯ ಐಎಎಸ್ ಅಧಿಕಾರಿ | ಬಿಹಾರ



smraju777@gmail.com


ಮಾನವ ಶರೀರದ ಹಲವಾರು ಆರೋಗ್ಯ ಅಸ್ವಸ್ಥತೆಗಳನ್ನು ಶರೀರವೇ ಶಾಶ್ವತವಾಗಿ ಗುಣಪಡಿಸುತ್ತದೆ. ಅದಕ್ಕೆ ಪೂರಕ ಪೌಷ್ಟಿಕತೆ ನೀಡಿದರಾಯಿತು. ಗುಣಪಡಿಸುವ ಕೆಲಸವನ್ನು ಶರೀರ ತನ್ನಿಂದ ತಾನೇ ಮಾಡಿಕೊಳ್ಳುತ್ತದೆ. ಏಕೆಂದರೆ ಸ್ವಸಹಾಯದಲ್ಲೇ ಸರಿಪಡಿಸಿ ಗುಣಪಡಿಸುವ ಸಾಮರ್ಥ್ಯವನ್ನು ಶರೀರಕ್ಕೆ ಪ್ರಕೃತಿ ಅದ್ಭುತ ರೀತಿಯಲ್ಲಿ ನೀಡಿದೆ..!

ಅಲೋಪತಿ ಅಥವಾ ನಾವು ರೂಢಭಾಷೆಯಲ್ಲಿ ಹೇಳುವ ಇಂಗ್ಲೀಷ್ ಔಷಧ ವ್ಯವಸ್ಥೆಯಲ್ಲಿ, ಗುಣಪಡಿಸಲಾಗದ ಆರೋಗ್ಯ ಸಮಸ್ಯೆಗಳ ಪಟ್ಟಿ ಬಹಳ ಉದ್ದವಿದೆ. ಪಟ್ಟಿ ಮಾಡುತ್ತಾ ಹೋದರೆ, ಅದು ದಿನದಿಂದ ದಿನಕ್ಕೇ ಉದ್ದವಾಗುತ್ತಲೇ ಹೋಗುವ ಸಾಧ್ಯತೆಗಳು ಅಧಿಕ. ಅಲ್ಲದೆ ಹೊಸ ಹೊಸ ಕಾಯಿಲೆ, ರೋಗ, ಅಸ್ವಸ್ಥತೆ ಹಾಗೂ ಆರೋಗ್ಯ ಸಮಸ್ಯೆಗಳು ದಿನೇದಿನೇ ಸೇರುತ್ತಲೇ ಇರುತ್ತವೆ.

ಸಾಮಾನ್ಯವಾಗಿ ಜನರನ್ನು ಕಾಡುವ ಪ್ರಮುಖ ಗುಣಪಡಿಸಲಾಗದ ಆರೋಗ್ಯ ಸಮಸ್ಯೆಗಳೆಂದರೆ ಕೊಲೆಸ್ಟರಾಲ್ ಸಮಸ್ಯೆ, ಥೈರಾಯ್ಡ್ ಸಮಸ್ಯೆ, ಕ್ಷೀಣಗೊಳ್ಳುವಿಕೆ, ಆಯಾಸ (ಬಳಲಿಕೆ/ ಸುಸ್ತಾಗುವಿಕೆ), ಕೂದಲು ಉದುರುವಿಕೆ, ಮುಖ ಸೌಂದರ್ಯ / ಕಾಂತಿ ವರ್ಧನೆ, ಮೊಡವೆ ನಿವಾರಣೆ, ರಕ್ತ ಶುದ್ಧೀಕರಣ, ರಕ್ತದೊತ್ತಡ ನಿಯಂತ್ರಣ, ಮೈತುರಿಕೆ(ಅಲರ್ಜಿ), ಶ್ವಾಸಕೋಶ ಸಂಬಂಧಿ ರೋಗ ( ಉಬ್ಬಸ/ ಅಸ್ತಮಾ), ಸಾಮಾನ್ಯ ಆರೋಗ್ಯ ಕಾಯ್ದಿರಿಸುವಿಕೆ, ಶರೀರಕ್ಕೆ ಉಲ್ಲಾಸ ತುಂಬುವಿಕೆಯಂತಹ ಗುಣಪಡಿಸಲಾಗದ ಆರೋಗ್ಯ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯವಿದೆ.

ಆಧುನಿಕ ಜೀವನ ಶೈಲಿಯು ಬಹಳಷ್ಟು ಆರೋಗ್ಯದ ಅಸ್ವಸ್ಥತೆಗಳಿಗೆ ಆತಿಥ್ಯ ನೀಡುತ್ತದೆ. ಪ್ರಕೃತಿಯ ಕೂಸಾದ ನಾವಿಂದು ಪ್ರಕೃತಿಯಿಂದ ದೂರ ಸರಿಯುತ್ತಿದ್ದೇವೆ. ಪ್ರಕೃತಿದತ್ತ ಸುವ್ಯವಸ್ಥೆ ನಮಗೆ ನೈಜವಾಗಿದ್ದರೂ ಕೃತಕ ಸೃಷ್ಟಿಯ ಅವ್ಯವಸ್ಥೆಯಲ್ಲಿ ಜೀವನವನ್ನು ನಾವಿಂದು ಬೆಸೆದು ಕೊಳ್ಳುತ್ತಿದ್ದೇವೆ. ನಮ್ಮ ಜೀವನಕ್ಕಾಗಿ, ಸಾಕಷ್ಟು ಪೌಷ್ಟಿಕಾಂಶಗಳನ್ನು ಪ್ರಕೃತಿ ಉಚಿತವಾಗಿ ನೀಡಿದರೂ, ಅವುಗಳನ್ನು ಬಳಸಿಕೊಳ್ಳುವ ಬದಲಾಗಿ ಆಧುನಿಕತೆಯ ಬಣ್ಣವರ್ಣಗಳ ಐಷಾರಾಮದ ಮಾಯಾಲೋಕದ ಬೆನ್ನತ್ತಿ ಸಾಗುತ್ತಾ ಅವುಗಳಿಂದ ದೂರವಾಗಿ, ಪ್ರಕೃತಿ ನೀಡಿದ ಕೊಡುಗೆಯ ಪ್ರಯೋಜನ ಪಡೆಯುತ್ತಿಲ್ಲ.

ಸ್ಪರ್ಧಾತ್ಮಕ ಜೀವನದ ವ್ಯವಹಾರಿಕ ಒತ್ತಡ ಒಂದೆಡೆ. ಜೀವಿತದ ಗುರಿ ತಲುಪದ ಓಟ ಇನ್ನೊಂದೆಡೆ, ಇದು 'ವ್ಯವಸ್ಥೆಯಿಂದ ಹೊರಬರಲಾಗದ' ಜನಸಾಮಾನ್ಯರ ದಿನಚರಿಯಾಗಿದೆ. ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿ, ಹತಾಶೆಯ ಜೊತೆ ಒತ್ತಡದ ಬದುಕಿನ ಅಸ್ವಸ್ಥತೆ ಹೊತ್ತು ಬದುಕುತ್ತಾರೆ.

ಆಧುನಿಕ ವೈದ್ಯಕೀಯ ಜಗತ್ತು ಅತ್ಯಾಧುನಿಕ ಉಪಕರಣ, ಚಿಕಿತ್ಸಾ ಕ್ರಮ ಪದ್ಧತಿ, ಉತ್ತಮ ವೈದ್ಯಕೀಯ ವ್ಯವಸ್ಥೆ, ತಜ್ಞ ವೈದ್ಯರು ಹಾಗೂ ಅತ್ಯುತ್ತಮ ಔಷಧಗಳನ್ನು ನೀಡಿದೆಯಾದರೂ ಮಾನವರನ್ನು ಜೀವನ ಪರ್ಯಂತ ಕಾಡುವ ಹಲವಾರು ಆರೋಗ್ಯ ಅಸ್ವಸ್ಥತೆಗಳಿಗೆ, ಕಾಯಿಲೆಗಳಿಗೆ, ರೋಗಗಳಿಗೆ ಯಾವುದೇ ರೀತಿ ಪರಿಣಾಮಕಾರಿ ಔಷಧ, ಶಾಶ್ವತ ಪರಿಹಾರ ವ್ಯವಸ್ಥೆ ಇನ್ನೂ ನಮ್ಮ ಆಧುನಿಕ ವಿಜ್ಞಾನಕ್ಕೆ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಇಂತಹ ಸಂದರ್ಭದಲ್ಲಿ, ಸುಮಾರು 5000 ವರ್ಷಗಳ ಇತಿಹಾಸ ಹೊಂದಿರುವ ವೇದಗಳ ಸಾರ ಹಿಡಿದು ಆಯುರ್ವೇದ ಆಧಾರದ ವಿಶಿಷ್ಟ ಗಿಡಮೂಲಿಕಾ ಕಷಾಯಗಳು ಶಾಶ್ವತ ಪರಿಹಾರ ನೀಡುವ ಪರಿಣಾಮಕಾರಿ ರಸೌಷಧಗಳಾಗುತ್ತವೆ.

ಈಗ ನನ್ನ ಅನುಭವದಲ್ಲಿ ಶರೀರದಲ್ಲಿ ಇಂತಹ ಮಾರ್ಪಾಡನ್ನು ಉಂಟುಮಾಡಬಲ್ಲ, ಜೀವಕೋಶಕಣಗಳ ಪುನರುಜ್ಜೀವನ ಪ್ರಕ್ರಿಯೆಗಾಗಿ ಸಿದ್ಧಗೊಳಿಸಿದ ರಸೌಷಧ ಕಷಾಯದ ವಿಷಯಕ್ಕೆ ಬರೋಣ. ಇದಕ್ಕೆ ಮಿರಾಕಲ್ ಡ್ರಿಂಕ್ಸ್ ಆ್ಯಂಟಿ ಏಜಿಂಗ್ ಔಷಧ ಕಷಾಯ ಎಂದು ಹೆಸರಿಟ್ಟಿದ್ದೇನೆ. ಇದು 100% ಗಿಡಮೂಲಿಕಾ ಉತ್ಪನ್ನ. ಭಾರತದ ವಿವಿಧ ರಾಜ್ಯಗಳ ಗುಡ್ಡಪ್ರದೇಶಗಳಲ್ಲಿ ದಟ್ಟಾರಣ್ಯಗಳಲ್ಲಿ ನೈಸರ್ಗಿಕವಾಗಿ ಬೆಳೆದ ಗಿಡಮೂಲಿಕೆಗಳನ್ನು, ಹಲವಾರು ಬುಡಕಟ್ಟು ಸಮುದಾಯದವರು ತಮ್ಮ ಕೈಯಾರೆ ಹೆಕ್ಕಿ ಆಯ್ದುತೆಗೆದು ಸಂಗ್ರಹಿಸಿದ ಕಚ್ಚಾ ವಸ್ತುಗಳನ್ನಷ್ಟೇ ಬಳಸಲಾಗುತ್ತಿದೆ. ಅವುಗಳನ್ನು ದೇಶದ ಅಂಗೀಕೃತ ಪ್ರಯೋಗಾಲಗಳಲ್ಲಿ ಪರೀಕ್ಷೆಗೊಳಪಡಿಸಲಾಗುತ್ತದೆ. ಓಂಃಐ/ಣಖಔ 17025 ಗುಣಮಟ್ಟ ಅಂಗೀಕಾರದ ಅಂತರ್ ರಾಷ್ಟ್ರೀಯ ಅತ್ಯುತ್ತಮ ಗುಣಮಟ್ಟ ಅಭ್ಯಾಸ ವ್ಯವಸ್ಥೆಯ (Good manufacturing practice - GMP) ಸಂಶೋಧನಾಲಯ, ಪ್ರಯೋಗಾಲಯ ಹಾಗೂ ಸಂಪೂರ್ಣ ಯಾಂತ್ರಿಕ ಅತ್ಯಾಧುನಿಕ ಉತ್ಪಾದನಾ ಘಟಕಗಳಲ್ಲಿ ತಯಾರಿಸಲಾಗುತ್ತದೆ.

ಕೇಂದ್ರ ಸರಕಾರದ ಔಷಧ ಮತ್ತು ಸೌಂದರ್ಯ ನಿಯಂತ್ರಣ ಕಾಯಿದೆ 1940 ಇದರ ಅನುಚ್ಛೇದ 1ರಲ್ಲಿ ವಿವರಿಸಲಾದ ಗಿಡಮೂಲಿಕೆಗಳನ್ನು ಮಾತ್ರ ಬಳಸಲಾಗುತ್ತದೆ. ನಿಮ್ಮ ಮಾಮೂಲಿ ಇಂಗ್ಲೀಷ್ ಔಷಧಕ್ಕೆ ಪೂರಕ ಎಂದು ಭಾವಿಸಿ ಪ್ರಾರಂಭದಲ್ಲಿ ಸೇವಿಸಿ. ಆನಂತರ ಹಂತಹಂತವಾಗಿ ಕಡಿಮೆಗೊಳಿಸುತ್ತಾ, ವೈದ್ಯಕೀಯ ಪರೀಕ್ಷೆಗಳನ್ನು ಆಗಾಗ ಕಾಲಕಾಲಕ್ಕೆ ಸರಿಯಾಗಿ ನಡೆಸುತ್ತಾ,ತೃಪ್ತಿಕರವೆನಿಸಿದಾಗ ಇಂಗ್ಲೀಷ್ ಔಷಧ ನಿಲ್ಲಿಸಿ.

ಈ ಕಷಾಯಕ್ಕೆ ಯಾವುದೇ ಬಣ್ಣ, ಪರಿಮಳ, ಅಮಲುದಾಯಕ(ಮಾದಕ), ಲೋಹ, ಉತ್ತೇಜಕಗಳನ್ನು ಸೇರಿಸಿಲ್ಲ. ಯಾವುದೇ ರೀತಿಯ ಅಡ್ಡಪರಿಣಾಮವಿಲ್ಲ, ಯಾವುದೇ ದುಷ್ಪರಿಣಾಮವಿಲ್ಲ. ಇದರಲ್ಲಿ ಗಮನಿಸಬಹುದಾದ ಒಂದು ಅಂಶವೆಂದರೆ ಇದರ ಕಟು ಮತ್ತು ಕಹಿ ರುಚಿ. ಮತ್ತು ಸಸ್ಯಜನ್ಯ ಗಿಡಮೂಲಿಕಾ ಎಲೆಗಳ ನೈಜ ಮತ್ತು ಗಾಢ ಪರಿಮಳ. ಕಳೆದ 15 ವರ್ಷಗಳಲ್ಲಿ ಸಾವಿರಾರು ರೋಗಿಗಳನ್ನು ಗುಣಪಡಿಸಿದ ಈ ತನಕದ ಪಯಣದಲ್ಲಿ ಯಾವುದೇ ತೆರನಾದ ಅಡ್ಡಪರಿಣಾಮಗಳು ಯಾವುದೇ ರೋಗಿಯಲ್ಲೂ ಕಂಡು ಬಂದಿಲ್ಲ. ಭಾರತದ ಕಾನೂನು ನಿಯಮದ ಪ್ರಕಾರ ಇದರಲ್ಲಿ ಅಗತ್ಯ ಆಹಾರ ಸಂರಕ್ಷಕ ಸೋಡಿಯಂ ಬೆಂಜೋವೇಟ್ ಅನ್ನು ಮಾತ್ರ ನಿರ್ದಿಷ್ಟ ಪ್ರಮಾಣದಲ್ಲಿ(0.05%ರಷ್ಟು) ಸೇರಿಸಲಾಗಿದೆ.

ಕಷಾಯದಿಂದ ರಕ್ತ ಸಂಬಂಧಿ ಕಾಯಿಲೆಗಳಾದ, ರಕ್ತ ಶುದ್ಧೀಕರಣ ಮತ್ತು ಏಡ್ಸ್ ರಕ್ತ ಶುದ್ಧೀಕರಣ. ರಕ್ತದೊತ್ತಡ(BP0) – ಅಧಿಕ ರಕ್ತದೊತ್ತಡ (Hypertension) ನಿಯಂತ್ರಣ, ಶರೀರ ತೂಕ ಇಳಿಸುವುದು ಸಾಧ್ಯವಿದೆ. ಯುವ ಪ್ರಾಯದ ಸಮಸ್ಯೆಗಳಾದ ಮುಖದ ಮೊಡವೆ, ಮೊಡವೆ ಕಲೆನಿವಾರಣೆ ಜೊತೆ ಮುಖದ ಕಾಂತಿಯನ್ನು ಇದು ವರ್ಧಿಸುತ್ತದೆ. ಸಾಮಾನ್ಯವಾಗಿ ಜನರನ್ನು ಕಾಡುವ ಪ್ರಮುಖ ಗುಣಪಡಿಸಲಾಗದ ಇನ್ನು ಕೆಲವು ಆರೋಗ್ಯ ಸಮಸ್ಯೆಗಳಾದ ಕೊಲೆಸ್ಟರಾಲ್, ಥೈರಾಯ್ಡ್, ಟ್ರೈಗ್ಲೈಸರೈಡ್ (ರಕ್ತದಕೊಬ್ಬು) ಗಳನ್ನು ನಿಯಂತ್ರಿಸಿ ಸದಾ ಹತೋಟಿಯಲ್ಲಿಡಲು ಈ ಮಿರಾಕಲ್ ಡ್ರಿಂಕ್ಸ್ ಆದ ಆ್ಯಂಟಿ ಏಜಿಂಗ್ ಔಷಧ ಕಷಾಯ ಅತ್ಯುತ್ತಮ ಹಾಗೂ ಫಲಪ್ರದ ಚಿಕಿತ್ಸಾ ಉಪಚಾರವಾಗಿದೆ. ಶರೀರದ ಆಯಾಸ ಸಂಬಂಧಿ ಅಸ್ವಸ್ಥತೆಗಳಾದ ಕ್ಷೀಣಗೊಳ್ಳುವಿಕೆ, ಬಳಲಿಕೆ(ಸುಸ್ತಾಗುವಿಕೆ) ಹಾಗೂ ಚರ್ಮ ಸಂಬಂಧಿ ಮೈತುರಿಕೆ(ಅಲರ್ಜಿ) ಮತ್ತು ಉಸಿರಾಟ ತೊಂದರೆಯ ಸಾಮಾನ್ಯ ಕಾಯಿಲೆ ಅಸ್ತಮಾ (ಶ್ವಾಸ ರೋಗ/ಉಬ್ಬಸ) ಗಳಿಗೆ ಈ ಕಷಾಯ ರಾಮಬಾಣ.

ಮಿರಾಕಲ್ ಡ್ರಿಂಕ್ಸ್ ಆದ ಆ್ಯಂಟಿ ಏಜಿಂಗ್ ಔಷಧ ಕಷಾಯ ಅಥವಾ ಮಿರಾಕಲ್ ಡ್ರಿಂಕ್ಸ್ (ಎಸ್–1ಸೇವಿಸುವ ಪ್ರಮಾಣ ಹಾಗೂ ಬಳಸುವ ವಿಧಾನ

ಪ್ರತಿ ದಿನ ಬೆಳಿಗ್ಗೆ ಎದ್ದ ತಕ್ಷಣ ಖಾಲಿಹೊಟ್ಟೆಯಲ್ಲಿ 30ಎಂಎಲ್ ಔಷಧ ಕಷಾಯವನ್ನು 60ಎಂಎಲ್. ಬೆಚ್ಚನೆ ನೀರಿಗೆ ಸೇರಿಸಿ ಸೇವಿಸಬೇಕು. ಕೊಲೆಸ್ಟರಾಲ್, ಥೈರಾಯ್ಡ್, ಟ್ರೈಗ್ಲೈಸರೈಡ್ ( ರಕ್ತದಕೊಬ್ಬು) ಮತ್ತು ಉಸಿರಾಟದ ಅಸ್ತಮಾ (ಶ್ವಾಸರೋಗ/ ಉಬ್ಬಸ) ಗಳಿಗೆ ಇದೇ ಪ್ರಮಾಣದಲ್ಲಿ ಬೆಳಿಗ್ಗೆ ಮತ್ತು ಸಂಜೆ ಎರಡು ಬಾರಿ ಸೇವಿಸಬೇಕು.

ಔಷಧ ಕಷಾಯಗಳ ಕಹಿ ರುಚಿಯನ್ನು ನಿಂಬೆ ಹಣ್ಣಿನ ರಸ ಅಥವಾ ಜೇನುತುಪ್ಪ ಬೆರೆಸಿ ಸೇವಿಸುವ ಮೂಲಕ ಸ್ವಲ್ಪ ಕಡಿಮೆ ಮಾಡಬಹುದು. ಇನ್ನೊಂದು ಸರಳ ಉಪಾಯವೆಂದರೆ, ಕಹಿರುಚಿ ಕಾರಣ ನಮ್ಮ ನಿರ್ದಿಷ್ಟ ಔಷಧ ಕಷಾಯ ಸೇವನಾ ಪ್ರಮಾಣ 30 ಎಮ್.ಎಲ್ , ಒಮ್ಮೆಲೇ ಕುಡಿಯಲು ಕಷ್ಟವಾದಲ್ಲಿ ಚಿಂತೆಪಡಬೇಕಿಲ್ಲ. ಪ್ರಾರಂಭ ಹಂತದಲ್ಲಿ 7.5 ಎಂಎಲ್. ಸೇವಿಸುವ ಮೂಲಕ ಆರಂಭಿಸಿ, ಮಾರನೇ ದಿನದಿಂದ ಪ್ರಮಾಣವನ್ನು 15 ಎಂಎಲ್. ಮಟ್ಟಕ್ಕೇರಿಸಿ, ಹೀಗೆ ನಿಮ್ಮ ಮನಸ್ಸಿಗೆ ಹಿತ, ಅನುಕೂಲವಾಗುವಂತೆ ಪ್ರಮಾಣ ಅಧಿಕಮಾಡುತ್ತಾ, ಕೊನೆಗೆ 30 ಎಂಎಲ್ ಹಂತ ತಲುಪಿರಿ. ಎಷ್ಟೇ ತಣ್ಣಗೆ ಕೊರೆಯುವ ನೀರಾದರೂ ಮೊದಲ ಹನಿ ಬಿದ್ದ ನಂತರ ಶರೀರ ಎಷ್ಟು ತಂಬಿಗೆ ನೀರನ್ನೂ ಸುರಿಸಿಕೊಳ್ಳುವುದಿಲ್ಲವೇ? ಎಷ್ಟು ಚಳಿ ಇದ್ದರೂ, ಚಳಿಗಾಲದ ಹರಿವ ತಣ್ಣೀರಲ್ಲಿ ಮುಳುಗಿ ಹರಕೆಯ ಸ್ನಾನಮಾಡುವುದಿಲ್ಲವೇ.. ಹಾಗೇ, ಶರೀರದ ಶಾಶ್ವತ ಆರೋಗ್ಯಕ್ಕಾಗಿ ಗಿಡಮೂಲಿಕೆಗಳ ಸಹಜ ಕಹಿರುಚಿ ಹಾಗೂ ಜಿಗುಟು ಪರಿಮಳ ಸಹಿಸಲಾಗದೇ?

## ಶಾಶ್ವತ ಪರಿಹಾರ

**ಗುಣಪಡಿಸಲಾಗದ ಆರೋಗ್ಯ ಸಮಸ್ಯೆಗಳಿಗೂ ಪರಿಣಾಮಕಾರಿ ಶಾಶ್ವತ ಪರಿಹಾರ, ಇಂಗ್ಲೀಷ್ ಔಷಧ ಗುಣಪಡಿಸಲಾಗದ ಹತ್ತುಹಲವು ಅನಾರೋಗ್ಯಗಳಿಗೂ ನಿಮ್ಮ ಶರೀರ ಸ್ವತಃ ನೀಡಬಲ್ಲುದು ಶಾಶ್ವತ ಪರಿಹಾರ- ಆ್ಯಂಟಿ ಏಜಿಂಗ್ ಕಷಾಯದಿಂದ.**

## ಔಷಧ ದೊರೆಯುವ ಸ್ಥಳಗಳು

**ಸ್ಟ್ಯಾನಿ ಪಾಯ್ಸ್, ಪ್ರಧಾನ ವ್ಯವಸ್ಥಾಪಕರು, ಮಳ್ಳೂರು ಫ್ಲೋರಾ ಅಂಡ್ ಹಾಸ್ಪಿಟ್ಯಾಲಿಟಿ ಪ್ರೈ.ಲಿ., ನಂ: 11, ಆರ್‌ಬಿಐ ಕಾಲೋನಿ, ಆನಂದ ನಗರ, ಬೆಂಗಳೂರು, (ಮೊ.9108992560). ಅಪೋಲೋ ಫಾರ್ಮಾ, ಮೆಡ್ ಪ್ಲಸ್, ಬೆಂಗಳೂರಿನ ಆಯುರ್ವೇದ–1, ಖಾದಿನೇಷನ್, ಸ್ನ್ಯಾಪ್ ಡೀಲ್, miracledrinks.in ನಲ್ಲಿ ಔಷಧಗಳು ಲಭ್ಯ. ಅಲ್ಲದೇ ಏಪ್ರಿಲ್ 17ರಿಂದ ಸಂಯುಕ್ತ ಕರ್ನಾಟಕ ಪತ್ರಿಕಾ ಕಾರ್ಯಾಲಯಗಳಲ್ಲೂ ಲಭ್ಯವಾಗಲಿದೆ. ಪ್ರಸ್ತುತ ಸಂಯುಕ್ತ ಕರ್ನಾಟಕ, ನಂ:2, ರೆಸಿಡೆನ್ಸಿ ರಸ್ತೆ, ಬೆಂಗಳೂರು (22214392) ಕಚೇರಿಯಲ್ಲಿ ಔಷಧಗಳು ಲಭ್ಯವಿದೆ.**